ಸತ್ರ ಪ್ರಕರಣ ಸಂಖ್ಯೆ: 26/2025

| | |
|---|---|
| ಪ್ರಾಸಾ | 02 |
| ಚಾಸಾ | 02 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 26/2025

ಸಾಕ್ಷಿಗೆ ತೆಲುಗು ಮಾತ್ರ ಬರುತ್ತಿದ್ದರಿಂದ ವಕೀಲರಾದ ಶ್ರೀ. ಬಿ.ಕೆ. ಆನಂದ್ ರೋಲ್ ನಂ: **KAR-1673/2012** ರವರನ್ನು ಸಾಕ್ಷಿ ವಿಚಾರಣೆಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಲು ನೇಮಿಸಿಕೊಂಡಿರುತ್ತದೆ. ಸದರಿ ವಕೀಲರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಗೆ ತರ್ಜುಮೆದಾರರ ಮುಖಾಂತರ ತೆಲುಗು ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ದಿನೇಶ್ |
| ಗಂಡನ ಹೆಸರು | : | ಲೇಟ್. ಶಂಕರಪ್ಪ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಹಣ್ಣಿನ ವ್ಯಾಪಾರ |
| ವಾಸಸ್ಥಳ | : | ಲೇಪಾಕ್ಷಿ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

1. ಪ್ರಾಸಾ-1 ನನ್ನ ಅಕ್ಕ, ಚಾಸಾ-3- ನನ್ನ ತಾಯಿ, ಚಾಸಾ-4-ಸಿಂದು ನನ್ನ ಅಕ್ಕ, ಚಾಸಾ-5-ವೆಂಕಟೇಶ್‌ರವರು ಬಿಳ್ಳೂರು ಸಂತೆಯಲ್ಲಿ ನಮ್ಮ ಜೊತೆ ವಿಳ್ಯೆದೆಲೆ ವ್ಯಾಪಾರ ಮಾಡುತ್ತಿದ್ದರು. ಚಾಸಾ-6 ರವರ ಪರಿಚಯ ಇದೆ, ಚಾಸಾ-7 ರಿಂದ 10 ರವರ ಪರಿಚಯ ಇರುವುದಿಲ್ಲ. ವಿ.ಸಿ. ಮುಖಾಂತರ ಹಾಜರುಪಡಿಸಿದ

| | |
|---|---|
| ಪ್ರಾಸಾ | 02 |
| ಚಾಸಾ | 02 |

ಆರೋಪಿಯನ್ನು ನೋಡಿ ಗುರುತಿಸಿದ್ದು, ಆತ ನನ್ನ ಭಾವ ಎಂದು ನುಡಿಯುತ್ತಾರೆ.

2. ನನ್ನ ತಂದೆ, ತಾಯಿಗೆ ನಾಲ್ಕು ಜನ ಮಕ್ಕಳಿರುತ್ತೇವೆ. ಅವರುಗಳೆಂದರೆ ಮೂರು ಜನ ಹೆಣ್ಣು ಮಕ್ಕಳು, ನಾನು ಒಬ್ಬ ಗಂಡು ಮಗ. ಮೂರು ಜನ ಹೆಣ್ಣುಮಕ್ಕಳಿಗೆ ಮದುವೆಯಾಗಿರುತ್ತದೆ. ಪ್ರಾಸಾ-1-ರೋಜ ರವರು ನನ್ನ ದೊಡ್ಡ ಅಕ್ಕ. ಪ್ರಾಸಾ-1 ರವರಿಗೆ ಆರೋಪಿಯೊಂದಿಗೆ ಮದುವೆಯಾಗುವ ಪೂರ್ವದಲ್ಲಿ ಮದುವೆಯಾಗಿತ್ತು. ಆತ ಮದುವೆಯಾದ 4 ತಿಂಗಳ ನಂತರ ಕುಡಿದು ಕುಡಿದು ಸತ್ತು ಹೋಗಿರುತ್ತಾರೆ. ಅಂದಿನಿಂದ ಪ್ರಾಸಾ-1 ರವರು ನಮ್ಮ ಜೊತೆ ವಾಸವಿರುತ್ತಾರೆ. 2023 ರಲ್ಲಿ ಪ್ರಾಸಾ-1 ರವರು ಆರೋಪಿಯನ್ನು ಪ್ರೀತಿಸಿ ಮದುವೆಯಾಗಿರುತ್ತಾರೆ. ಆರೋಪಿಗೂ ಸಹ ಬೇರೊಂದು ಮದುವೆಯಾಗಿತ್ತು. ಆರೋಪಿಗೆ ಮದುವೆಯಾಗಿದ್ದ ಇನ್ನೊಬ್ಬ ಹೆಂಡತಿ-ರೂಪಗೆ ಇನ್ನೊಬ್ಬ ಗಂಡ ಇದ್ದ ಮೇರೆಗೆ ಆಕೆಯನ್ನು ಬಿಟ್ಟು ಆರೋಪಿ ನನ್ನ ಅಕ್ಕನನ್ನು ಪ್ರೀತಿಸಿ ಮದುವೆಯಾಗಿರುತ್ತಾರೆ.

3. ಪ್ರಾಸಾ-1 ರವರು ಆರೋಪಿಯನ್ನು ಮದುವೆಯಾದ ನಂತರ ಆಕೆ ಆರೋಪಿಯೊಂದಿಗೆ ವಾಸವಾಗಿದ್ದರು. ಮದುವೆಯಾದ ಐದು ತಿಂಗಳು

| | |
|---|---|
| ಪ್ರಾಸಾ | 02 |
| ಚಾಸಾ | 02 |

ಅವರಿಬ್ಬರು ಚೆನ್ನಾಗಿದ್ದರು, ಆನಂತರ ನಮ್ಮ ಅಕ್ಕ ಗರ್ಭಿಣಿಯಾಗಿದ್ದರಿಂದ ನಮ್ಮ ಮನೆಗೆ ಬಂದು ನೆಲೆಸಿದ್ದರು. ಸದರಿ ಸಮಯ ಆರೋಪಿ ಮೊದಲನೇ ಹೆಂಡತಿ ರೂಪರವರೊಂದಿಗೆ ಸಂಬಂಧವಿಟ್ಟುಕೊಂಡಿದ್ದರು, ಅದನ್ನು ನನ್ನ ಅಕ್ಕ ಪ್ರಶ್ನಿಸಿದಾಗ ಜಗಳವಾಗಿದ್ದು, ಜಗಳ ಮಾಡಿಕೊಂಡು ಮನೆಯಿಂದ ಆರೋಪಿ ಹೋಗುತ್ತಿರುವ ಸಮಯ ಚಿಲಮತ್ತೂರು ಹತ್ತಿರ ಕಣಿವೆಯಲ್ಲಿ ಆಟೋ ಅಪಘಾತವಾಗಿ ಎಡಕೈ ಮತ್ತು ಎಡಕಾಲು ಮುರಿದು ಗಾಯಗಳಾಗಿತ್ತು. ಆ ಸಮಯ ನಾವೇ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿದ್ದೇವು. ಚಿಕಿತ್ಸೆಯ ನಂತರ ವಾಸಿಯಾಗುವ ತನಕ ಆರೋಪಿ ನಮ್ಮ ಮನೆಯಲ್ಲಿದ್ದರು. ಆ ಸಂದರ್ಭದಲ್ಲಿ ಆರೋಪಿ ಮತ್ತೆ ಜಗಳ ತೆಗೆದು ಮನೆಯಿಂದ ಹೊರಟು ಹೋಗಿರುತ್ತಾರೆ. ಆನಂತರ ಪುನಃ ಆಗಾಗ್ಗೆ ಮನೆಗೆ ಬಂದು ಪ್ರಾಸಾ1 ರವರನ್ನು ಸಾಯಿಸುತ್ತೇನೆಂದು ಬೆದರಿಕೆ ಹಾಕಿ ಹೋಗುತ್ತಿದ್ದರು.

4. ಸಾಮಾನ್ಯವಾಗಿ ಪ್ರತಿ ಬುಧವಾರ ಬಾಗೇಪಲ್ಲಿ ತಾಲ್ಲೂಕು ಬಿಳ್ಳೂರು ಗ್ರಾಮದ ಸಂತೆಗೆ ಹೋಗುತ್ತಿದ್ದೇವು, ಅದರಂತೆ ಆ ದಿನ ಬೆಳಿಗ್ಗೆ 8.30 ಕ್ಕೆ ವ್ಯಾಪಾರಕ್ಕೆ ನಾನು, ನನ್ನ ಅಕ್ಕ ಮತ್ತು ನನ್ನ ತಾಯಿ ಬುಲೇರೋ ವಾಹನದಲ್ಲಿ ಹೊರಟೇವು. ವ್ಯಾಪಾರ ಮುಗಿದು ಅಂಗಡಿ ಮುಚ್ಚುವ ಸಮಯ ಸಂಜೆ 6.30 ದಿಃ 08.01.2025 ರಂದು ಆರೋಪಿ ಮಾಸ್ಕ್ ಹಾಕಿಕೊಂಡು ಕೈಯಲ್ಲಿ ಕತ್ತಿ

| | |
|---|---|
| ಪ್ರಾಸಾ | 02 |
| ಚಾಸಾ | 02 |

ಹಿಡಿದುಕೊಂಡು ನನ್ನ ಅಕ್ಕನ ಎಡತೊಡೆಗೆ ಮತ್ತು ಎಡ ಕೈಗೆ ತಿವಿದಿರುತ್ತಾರೆ. ಸದರಿ ಸಮಯ ವಾಹನದಿಂದ ಇಳಿಯುವ ಸಮಯ ಆರೋಪಿ ಎಡಪಕ್ಕೆಗೆ ಕತ್ತಿಯಿಂದ ತಿವಿದಿರುತ್ತಾರೆ. ಅದರ ನಂತರ ನನ್ನ ತಾಯಿಗೂ ಸಹ ಆರೋಪಿ ಕತ್ತಿಯಿಂದ ಹೊಟ್ಟೆಗೆ ಮತ್ತು ಕುತ್ತಿಗೆಗೆ ತಿವಿದಿರುತ್ತಾರೆ. ನಾವುಗಳು ಅಲ್ಲಿ ಬಿದ್ದಿದಾಗ ಸದರಿ ಊರಿನವರು ಮತ್ತು ಪೊಲೀಸರು ನಮ್ಮನ್ನು ಬಾಗೇಪಲ್ಲಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದರು. ನಂತರ ಅಲ್ಲಿಂದ ನಮ್ಮನ್ನು ಚಿಕ್ಕಬಳ್ಳಾಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಅಲ್ಲಿಂದ ಮೂರು ಜನರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಸದರಿ ಆಸ್ಪತ್ರೆಯಲ್ಲಿ ನಾನು 15 ದಿವಸ, ನನ್ನ ತಾಯಿ-21 ದಿವಸ, ಅಕ್ಕ -3 ದಿವಸಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಆರೋಪಿ ನಮಗೆ ಹಲ್ಲೆ ಮಾಡಿ ಓಡಿ ಹೋಗುತ್ತಿದ್ದಾಗ ಊರಿನವರೆಲ್ಲಾ ಆತನನ್ನು ಹಿಡಿದುಕೊಂಡರು. ಆರೋಪಿ ಹಲ್ಲೆ ಮಾಡಲು ಉಪಯೋಗಿಸಿದ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು. ಮಾ 1 ನ್ನು ನೋಡಿ ಗುರುತಿಸಿರುತ್ತಾರೆ. ಕೃತ್ಯದ ಸಮಯ ನಾನು, ನನ್ನ ತಾಯಿ ಹಾಗೂ ನನ್ನ ಅಕ್ಕ ಧರಿಸಿದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮು. ಮಾ 2 ರಿಂದ 10 ನ್ನು ನೋಡಿ ಗುರುತಿಸಿರುತ್ತಾರೆ. ಆ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು

| | |
|---|---|
| ಪ್ರಾಸಾ | 02 |
| ಚಾಸಾ | 02 |

ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಸಾಕ್ಷಿಯು ತಾನು ಆಸ್ಪತ್ರೆಯಲ್ಲಿ ನೀಡಿದ್ದ ಹೇಳಿಕೆಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯಲ್ಲಿನ ಸಾಕ್ಷಿ ಸಹಿಗಳನ್ನು ಗುರುತಿಸಿರುತ್ತಾರೆ. ಸದರಿ ಹೇಳಿಕೆ ಯನ್ನು ನಿಪಿ 4 ಎಂದು, ಅದರಲ್ಲಿರುವ ಸಾಕ್ಷಿ ಸಹಿಗಳನ್ನು ನಿಪಿ 4(ಎ) ಯಿಂದ ನಿಪಿ 4(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಟಿ.ಬಿ.ಎನ್. ವಕೀಲರುಗಳಿಂದಃ**

5. ಆರೋಪಿಯನ್ನು ನನ್ನ ಅಕ್ಕ ಮದುವೆಯಾಗುವ ಪೂರ್ವದಲ್ಲಿ ಅವರಿಗೆ ಎರಡು ಮದುವೆಯಾಗಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ನಾನು, ನನ್ನ ಅಕ್ಕ ಮತ್ತು ತಾಯಿ ಜೊತೆಯಲ್ಲಿದ್ದೇವೆಂದರೆ ಸರಿ. ನನ್ನ ಅಕ್ಕನನ್ನು ಆರೋಪಿ ಮದುವೆಯಾಗುವ ಸಮಯ ದೊಡ್ಡಬಳ್ಳಾಪುರದಲ್ಲಿ ಟಮೋಟ ವ್ಯಾಪಾರ ಮಾಡುತ್ತಿದ್ದರು, ಬಂದ ಹಣವನ್ನು ನನ್ನ ಅಕ್ಕನಿಗೆ ತಂದು ನೀಡುತ್ತಿದ್ದರು ಎಂದರೆ ಸರಿಯಲ್ಲ. ಅದೇ ಸಮಯದಲ್ಲಿ ಆರೋಪಿ ಟೆಂಪೊ ಟ್ರಾವಲರ್ ಇಟ್ಟುಕೊಂಡು ವ್ಯವಹಾರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಟೆಂಪೊ ಟ್ರಾವಲರ್ ನ್ನು ಮಾರಾಟ ಮಾಡಿ ಅದರಿಂದ ಬಂದ 25 ಲಕ್ಷ ಹಣವನ್ನು ನಾನು ಮತ್ತು ನನ್ನ ಅಕ್ಕ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಘಟನೆ ನಡೆಯುವ ಪೂರ್ವದಲ್ಲಿ ನಾನು ಮತ್ತು ನನ್ನ ಅಕ್ಕ ಆರೋಪಿಯ ಮೇಲೆ ಗಲಾಟೆ ಮಾಡಿದ್ದೇವು ಎಂದರೆ

| | |
|---|---|
| ಪ್ರಾಸಾ | 02 |
| ಚಾಸಾ | 02 |

ಸರಿಯಲ್ಲ. ಆರೋಪಿ ನೀಡಿದ ಹಣದಲ್ಲಿ ನಾವು ಬೊಲೆರೋ ವಾಹನ ಖರೀದಿ ಮಾಡಿ ವ್ಯವಹಾರ ನಡೆಸುತ್ತಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಮೊದಲೆ ಬೊಲೆರೋ ವಾಹನವನ್ನು ಬ್ಯಾಂಕ್ ಲೋನ್ ಮಾಡಿ ಖರೀದಿಸಿದ್ದೇವು ಎಂದು ನುಡಿಯುತ್ತಾರೆ. ಬ್ಯಾಂಕ್ ಲೋನ್ ಮಾಡಿದ್ದ ಬಗ್ಗೆ ಈ ಮೊದಲು ಪೊಲೀಸರಿಗೆ ಹೇಳಿರುವುದಿಲ್ಲ. ಆರೋಪಿಯ ತಂದೆ ಪ್ರಸ್ತುತ ಅವರ ಮನೆಯಲ್ಲೆ ಇರುತ್ತಾರೆ. ಆರೋಪಿಗೆ ಎರಡು ಮನೆಗಳಿದ್ದು, ಅವುಗಳಲ್ಲಿ ಒಂದು ಮನೆಯನ್ನು ಆರೋಪಿ ಕಟ್ಟಿಸಿರುತ್ತಾರೆ, ಇನ್ನೊಂದು ಮನೆಯನ್ನು ಆರೋಪಿಯ ತಂದೆ ಕಟ್ಟಿಸಿರುತ್ತಾರೆ. ಆರೋಪಿಯ ತಂದೆ ಕಟ್ಟಿಸಿದ ಹಳೇ ಮನೆಯಲ್ಲಿ ಅವರ ತಂದೆ ವಾಸವಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಕಟ್ಟಿಸಿದ ಹೊಸ ಮನೆಯಲ್ಲಿ ಈಗ ಯಾರು ಇರುವುದಿಲ್ಲ. ಆರೋಪಿ ಕಟ್ಟಿಸಿದ ಹೊಸ ಮನೆ ನನ್ನ ಅಕ್ಕನ ಹೆಸರಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಸದರಿ ಮನೆಯನ್ನು ನನ್ನ ಅಕ್ಕನಿಗೋಸ್ಕರ ಆರೋಪಿಯ ತಂದೆ ಕಟ್ಟಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟುವ ಪೂರ್ವದಲ್ಲಿ ಮತ್ತು ನಂತರದಲ್ಲೂ ಆ ಮನೆ ಆರೋಪಿಯ ತಂದೆ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ಕಟ್ಟುವ ಪೂರ್ವದಲ್ಲಿ ಆರೋಪಿಯ ತಂದೆಯ ಹೆಸರಿನಲ್ಲಿತ್ತು, ನಂತರ ನನ್ನ ಅಕ್ಕನ ಮಗಳ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ಈ ಗಲಾಟೆ ನಡೆಯುವ ಪೂರ್ವದಲ್ಲಿ

| | |
|---|---|
| ಪ್ರಾಸಾ | 02 |
| ಚಾಸಾ | 02 |

ಹೊಸ ಮನೆ ನನ್ನ ಅಕ್ಕನ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ನನ್ನ ಅಕ್ಕನ ಹೆಸರಿನಲ್ಲಿದ್ದ ಕಾರಣ ಆರೋಪಿ ಬಂದು ಕೇಳಿದಾಗ ನಾವೇಲ್ಲಾ ಸೇರಿಕೊಂಡು ಆತನನ್ನು ಹೊಡೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಬರುವ ಪೂರ್ವದಲ್ಲಿ ಆತನ ತಂದೆಯನ್ನು ನಾವು ಮೂರು ಜನ ಜಗಳ ಮಾಡಿ ಓಡಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಊರಿನಿಂದ ಬಿಳ್ಳೂರು ಸಂತೆಗೆ ಬಾಗೇಪಲ್ಲಿ ಬಂದು ಹೋಗುತ್ತೇವೆ. ಸಂತೆಗೆ ಹೋಗಲು ನಾನು, ನನ್ನ ತಾಯಿ ಮತ್ತು ನನ್ನ ಅಕ್ಕ ಜೊತೆಯಲ್ಲಿ ಬರುತ್ತೇವೆ ಎಂದರೆ ಸರಿ. ಆ ರೀತಿ ಸಂತೆಗೆ ಬರುವ ಸಮಯ ಗಾಡಿ ಅಪಘಾತಗೊಂಡು ನಾವು ಗಾಯಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ಮಾಸ್ಕ್ ಹಾಕಿಕೊಂಡು ಬಂದ ಬಗ್ಗೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ದಿನ ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ, ನಾನು ನನ್ನ ಅಕ್ಕ ಮತ್ತು ನನ್ನ ತಾಯಿ ಆರೋಪಿಯ ಬಳಿ ಇದ್ದ ಹಣ ಮತ್ತು ಆಸ್ತಿಯನ್ನು ಲಪಟಾಯಿಸಿರುವುದರಿಂದ ಈ ಸುಳ್ಳು ಪ್ರಕರಣವನ್ನು ಸೃಷಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

| | |
|---|---|
| ಪ್ರಾಸಾ | 02 |
| ಚಾಸಾ | 02 |

**<u>ಮರು ವಿಚಾರಣೆ : ಇಲ್ಲ</u>**

**(ದಿನಾಂಕಃ 16.12.2025 ರಂದು ತೆರೆದ ನ್ಯಾಯಾಲಯದಲ್ಲಿ ತರ್ಜುಮೆದಾರರು ಸಾಕ್ಷಿ ಹೇಳಿದ್ದನ್ನು ತರ್ಜುಮೆ ಮಾಡಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ವಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**